ಊರಲ್ಲಿ ದೊಡ್ಡ ಸುದ್ದಿಯಾಗಿತ್ತು. ಎಲ್ಲರಿಗೂ ಬೆರಗು. ಟ್ರ್ಯಾಕ್ಟ್ರು ಅಂದ್ರೆ ಪರಸಪ್ಪ, ಪರಸಪ್ಪ ಅಂದ್ರೆ ಟ್ರ್ಯಾಕ್ಟ್ರು ಅನ್ನುವಂತಿದ್ದನು. ವಯಸ್ಸಿಗೂ ಮೊದಲೇ ಬಂದ ಬಿಳಿಗಡ್ಡದ, ನಲವತ್ತು ವರ್ಷದ ಆಳ್ತನದ, ಎಣ್ಣೆಗೆಂಪು ಬಣ್ಣದ ಪರಸಪ್ಪ ಟ್ರ್ಯಾಕ್ಟ್ರು ಮೇಲೆ ಕೂತರೆ ಟ್ರ್ಯಾಕ್ಟ್ರಿಗೆ ಒಂದು ಕಳೆ ಬರ್ತಾ ಇತ್ತು. ಈಗ ಏಕಾಏಕಿ ಟ್ರ್ಯಾಕ್ಟ್ರು ಬಿಟ್ಟು ಇಳಿದದ್ದು ಯಾಕೆ ಎಂಬುದು ಎಲ್ಲರ ಪ್ರಶ್ನೆ.

ಇತ್ತೀಚೆಗೆ ಟ್ರ್ಯಾಕ್ಟ್ರು ಹೊಡೆಯುವಾಗ ಆಗಾಗ ಗಾಡಿ ನಿಧಾನಗೊಳಿಸಿ ತನ್ನ ಅಂಗೈ ನೋಡಿಕೊಳ್ಳುತ್ತಿದ್ದ ಅಂತ ಊರಿನವರು ಮಾತನಾಡಿಕೊಳ್ಳುತ್ತಿದ್ದರು. ಅಂಗೈ ನೋಡಿಕೊಳ್ಳುವಾಗ ಅವನ ಮುಖದಲ್ಲಿ ಬೇಸರದ ಎಳೆಯೊಂದು ಮೂಡಿ ಮರೆಯಾಗುತ್ತಿತ್ತು.

ನಿನ್ನೆ ಹೊಲ ಉಳುವಾಗ ಹತ್ತಾರು ಮಾರು ಮುಗಿಸುವ ಹೊತ್ತಿಗೆ ಅಂಗೈ ನೋಡಿಕೊಳ್ಳುವುದು ಎರಡ್ಮೂರು ಬಾರಿಯಾಗಿತ್ತು. ಹೊಲದಲ್ಲಿ ಮೂಡುತ್ತಿದ್ದ ಗೆರೆಗಳನ್ನೊಮ್ಮೆ ತನ್ನ ಕೈಯಲ್ಲಿರುವ ಗೆರೆಗಳನ್ನೊಮ್ಮೆ ನೋಡಿಕೊಳ್ಳುತ್ತಿದ್ದ. ಹತ್ತಾರು ವರ್ಷ ಹೊಲದಲ್ಲಿ ಹೀಗೆ ಗೆರೆ ಮೂಡಿಸಲು ತನ್ನ ಅಂಗೈ ಗೆರೆಗಳೆನ್ನೆಲ್ಲಾ ತೆತ್ತಿದ್ದ.

ಟ್ರ್ಯಾಕ್ಟ್ರು ಹೊಡೆಯುವುದು ಬಿಟ್ಟು ಬೇರೆ ಕೆಲಸ ಗೊತ್ತಿರದ ಪರಸಪ್ಪ ಅವರಿವರ ಮನೆಯಲ್ಲಿ ಕೂಲಿಗೆ ಟ್ರ್ಯಾಕ್ಟ್ರು ಹೊಡೆಯುತ್ತಿದ್ದ. ಪರಸಪ್ಪ ಹೊಡೆಯುವುದಾದರೆ ಮಾತ್ರ ನಾವು ಹೊಲ ಹೊಡೆಸುವುದಾಗಿ ಜನ ಹೇಳುತ್ತಿದ್ದರಿಂದ ಪರಸಪ್ಪನಿಗೆ ಬಹಳ ಬೇಡಿಕೆ ಇತ್ತು. ನಾಳೆ ಒಂದಿನ ತನ್ನದೆ ಟ್ರ್ಯಾಕ್ಟ್ರು ಮಾಡಿಕೊಳ್ಳುವ ಗುಪ್ತ ಆಸೆಯೊಂದು ದಿನೇದಿನೇ ಅವನೊಳಗೆ ಬೆಳೆಯತೊಡಗಿತ್ತು. ಪರಸಪ್ಪ, ಟ್ರ್ಯಾಕ್ಟ್ರು ಪರಸಪ್ಪ ಆದದ್ದು ಊರಿನವರಿಗೆಲ್ಲಾ ಗೊತ್ತಿರುವ ಕಥೆಯೇ.

ಇಂತಹ ಪರಸಪ್ಪ ಹೊಲದ ಮಧ್ಯೆದಲ್ಲಿ ಟ್ರ್ಯಾಕ್ಟ್ರು ಬಿಟ್ಟು ಇಳಿದನೆಂದರೆ ಎಂಥವರಿಗೂ ಆಶ್ಚರ್ಯ.

ಉಳುತ್ತಾ ಟ್ರ್ಯಾಕ್ಟ್ರು ಮಧ್ಯೆ ಭಾಗಕ್ಕೆ ಬಂದಾಗ ಮತ್ತೊಮ್ಮೆ ಅಂಗೈ ನೋಡಿಕೊಂಡಿದ್ದಾನೆ. ಉಳುಮೆಯಾದ ಅರ್ಧ ಹೊಲ ನೋಡಿದ್ದಾನೆ. ಗೆರೆಗಳನ್ನೂ ನೋಡಿದ್ದಾನೆ. ಹೀಗೆ ನೋಡು ನೋಡುತ್ತಲೇ ಗಾಡಿ ನಿಲ್ಲಿಸಿ ದಡದಡ ಇಳಿದು 'ಇಲ್ಲ ಇನ್ಮೇಲೆ ನಾನು ಟ್ರ್ಯಾಕ್ಟ್ರು ಹತ್ತಲ್ಲ.. ಯಾರ್ ಹತ್ರನಾದರೂ ಹೊಡಿಸಿಕೊಳ್ಳಿ...' ಅನ್ನುತ್ತಾ ಇಳಿದು ಹೊರಟು ಹೋಗಿದ್ದಾನೆ.

ಅವನ ದನಿ ತುಂಬಿದ್ದು ಅಲ್ಲಿ ಯಾರಿಗೂ ತಿಳಿಯಲಿಲ್ಲ.

* * *

ಬೇವಿನಹಳ್ಳಿಯ ಬಿಳಿಮೀಸೆಯ ಸಂಕನಂಜಪ್ಪನು ಮಗ ಪರಸಪ್ಪನನ್ನು, ಸೊಸೆ ಗಿರಿಜಿಯನ್ನು ಎರಡು ವರ್ಷದ ಹಿಂದೆ ಹೊರಹಾಕಿದ್ದ. ಇದೇನು ತೀರಾ ಯಾರ ಮನೆಯಲ್ಲೂ ನಡೆಯದ ವಿಚಾರವೇನಾಗಿರಲಿಲ್ಲ. ಮದುವೆಯಾಗಿ ಎರಡು ವರ್ಷ ಐದು ತಿಂಗಳು ತುಂಬುವ ಮೊದಲೇ ಪರಸಪ್ಪನು ಹೆಂಡತಿ ಗಿರಿಜಿಯನ್ನು ಕರೆದುಕೊಂಡು ಮನೆಯಿಂದ ಹೊರಬೀಳಬೇಕಾಯ್ತು. ಕೈಯಲ್ಲಿ ಟ್ರ್ಯಾಕ್ಟ್ರು ಹೊಡೆಯುವ ಕೂಲಿ ಕೆಲಸ ಇತ್ತು. ಟ್ರ್ಯಾಕ್ಟ್ರು ಕೊಳ್ಳುವ ಆಸೆಯೂ ಇತ್ತು. ಶ್ರಾವಣ ತಿಂಗಳ ಒಂದು ದಿವ್ಸ ಮನೆಯ ಪಕ್ಕದಲ್ಲೇ ಬಿದಿರುಗಳ ಬಳಸಿ ವಪಾರ ಮಾಡಿಕೊಂಡು ಹೆಂಚು ಹೊದಿಸಿ, ಗೋಡೆ ಹಾಕಿಕೊಂಡು ಹೆಂಡತಿಯೊಂದಿಗೆ ಒಲೆ ಹಚ್ಚಿದ್ದ.

ಪರಸಪ್ಪನ ತಮ್ಮ ನಂದೀಶ ಕಾಲೇಜು ಓದುತ್ತಿದ್ದ. ಗಿರಿಜಿ ಅದೇನೊ ಅಂದಳು ಅಂತ ಎದ್ದ ಜಗಳ ಕೊನೆಗೆ ಸಂಕನಂಜಪ್ಪ ಇವರನ್ನು ಹೊರ ಹಾಕುವುದರೊಂದಿಗೆ ಮುಕ್ತಾಯವಾಗಿತ್ತು. ನಂದೀಶನ ಮದುವೆ ಆಗುವವರೆಗೂ ಮನೆಯಿಲ್ಲ ಮತ್ತು ಇರುವ ಮೂರು ಎಕರೆಯನ್ನು ನಂತರ ಹಂಚಿಕೊಳ್ಳುವ ಮಾತಿನ ಮೇಲೆ ಹೊರಬಂದಿದ್ದ. ಟ್ರ್ಯಾಕ್ಟ್ರು ಕೊಳ್ಳುವಾಗ ಬ್ಯಾಂಕಿಗೆ ದೀಡು ಮಾಡಿಕೊಡಲು ಸಂಕನಂಜಪ್ಪ ಒಪ್ಪಿದ್ದ.

ಮನೆಯಿಂದ ಬೇರೆ ಆದಮೇಲೆ ಹಗಲು ರಾತ್ರಿ ಟ್ರ್ಯಾಕ್ಟ್ರು ಹೊಡೆಯಲು ಆರಂಭಿಸಿದ್ದ. ದುಡಿದು ತಾನೊಂದು ಹೊಸ ಟ್ರ್ಯಾಕ್ಟ್ರು ತಂದು ಬಿಡಬೇಕು ಅನ್ನುವ ತುಡಿತವಿತ್ತು. ಬಂದ ಕೂಲಿ ದುಡ್ಡನ್ನು ಗಿರಿಜಿ ಕೈಯಲ್ಲಿ ಕೊಡ್ತಾ ಇದ್ದ. ಗಿರಿಜಿ ಸ್ತ್ರೀಶಕ್ತಿ ಸಂಘದಲ್ಲಿ ಎರಡು ಚೀಟಿ ಹಾಕಿದ್ದಳು.

ತಿಂಗಳ ತಿಂಗಳ ಅಕ್ಕಿ ಗೋಧಿ ತಗೊಳಾಕ್ಕಾದರೂ ಆದೀತು ಅಂತ ರೇಷನ್ ಕಾರ್ಡ್ ಮಾಡಿಸೋಕೆ ಹೋಗಿದ್ದ ಪರಸರಪ್ಪ. ನ್ಯಾಯಬೆಲೆ ಅಂಗಡಿಯವರು ನಿಮ್ಮ ಅಪ್ಪನ ಹೆಸರಿನ ಹಳೆಕಾರ್ಡಿನಲ್ಲಿ ನಿನ್ನ ಹೆಸರು ಇದೆ. ಅದನ್ನು ತೆಗೆಸು, ಆಮೇಲೆ ನೋಡುವ ಅಂದಿದ್ರು. ಅಪ್ಪನಿಗೆ ಹೇಳಿ ಹಳೆಯ ಕಾರ್ಡಿನಿಂದ ಅವನು ಮತ್ತು ಗಿರಿಜಿ ಇಬ್ಬರೂ ಹೊರ ಬಂದಿದ್ದರು.

ಮತ್ತೆ ಈಗ ಕಾರ್ಡ್ ಮಾಡಿಕೊಡಿ ಅಂತ ಹೋದಾಗ